O.S.No. 303/2017 P W - 1

ದಿನಾಂಕ 05.09.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಕೆ.ಎಂ. ವಕೀಲರಿಂದ :</u>

ನಾನು ಡಿಪ್ಲೊಮಾ ಮೇಕಾನಿಕಲ್ ವ್ಯಾಸಂಗ ಮಾಡಿದ್ದೇನೆ. ನಾನು ಕೆಎಸ್.ಆರ್.ಟಿ.ಸಿಯಲ್ಲಿ 1986 ರಿಂದ ಕಾರ್ಯ ನಿರ್ವಹಿಸುತ್ತಿದ್ದೆ. ಈಗ 2024 ರಲ್ಲಿ ನಿವೃತ್ತಿ ಹೊಂದಿದ್ದೇನೆ. ಹಳೇ ಸರ್ವೆ ನಂ 120/3 ರ ಮೂಲ ದಾಖಲೆ ಚಿಕ್ಕತಿಮ್ಮಮ್ಮನವರ ಹೆಸರಿನಲ್ಲಿದೆ. ಅದರ ವಿಸ್ತೀರ್ಣ 26 ಗುಂಟೆ ಆಗಿತ್ತು. ದಾವಾ ಸ್ವತ್ತಿನ ಮೂಲ ಖಾತೆದಾರರು ಲಿಂಗ ಬಿನ್ ಮುದ್ದಲಿಂಗೇಗೌಡರು ಎಂದರೆ ಸರಿಯಲ್ಲ. ಸರ್ವೆ ನಂ. 120/3 ರಲ್ಲಿ ಒಟ್ಟು 2 ಎಕರೆ 9 ಗುಂಟೆ ಜಮೀನು ಅದರಲ್ಲಿ 3 ಗುಂಟೆ ಖರಾಬು ಉಳಿಕೆ 2 ಎಕರೆ 6 ಗುಂಟೆ ಜಮೀನು ಅದರ ಮೂಲ ದಾಖಲೆ ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಮೂಡಲಿಂಗೇಗೌಡರ ಹೆಂಡತಿ ಗಿರಿಯಮ್ಮ ರವರು ಮೂಡಲಗಿರಿಗೌಡ ರವರ ಹೆಂಡತಿ ದೇವಿರಮ್ಮನವರಿಗೆ 24.08.1942 ರಲ್ಲಿ ನೋಂದಣಿ ದಾನ ಪತ್ರ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದೇವಿರಮ್ಮನವರಿಗೆ ಇಬ್ಬರು ಮಕ್ಕಳು ದೊಡ್ಡತಿಮ್ಮಮ್ಮ ಮತ್ತು ಚಿಕ್ಕತಿಮ್ಮಮ್ಮ. ದೊಡ್ಡ ತಿಮ್ಮಮ್ಮನವರ ಮಕ್ಕಳು ಈ ದಾವೆಯಲ್ಲಿನ ಪ್ರತಿವಾದಿಗಳು ಎಂದರೆ ಸರಿ.

ಚಿಕ್ಕತಿಮ್ಮಮ್ಮನವರು ಮದ್ದೂರು ತಾಲ್ಲುಕು ಕೊಂಡಬೋರನದೊಡ್ಡಿಗೆ ಮದುವೆ ಮಾಡಿಕೊಟ್ಟಿದ್ದು ಅವರು ಅಲ್ಲಿ ವಾಸವಾಗಿದ್ದಾರೆಎಂದರೆ ಸರಿ. ದೊಡ್ಡ ತಿಮ್ಮಮ್ಮನವರು ನಮ್ಮ ಊರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ದೊಡ್ಡ ತಿಮ್ಮಮ್ಮನವರ ಮರಣಾ ನಂತರ 1 ಮತ್ತು 2 ನೇ ಪ್ರತಿವಾದಿಯರು ನಮ್ಮ ಊರಿನಲ್ಲಿ ವಾಸವಾಗಿದ್ದಾರೇ ಎಂದರೆ ಸರಿ. ದೇವಿರಮ್ಮನವರು ತಮ್ಮ ಜೀವಿತಾವಧಿಯಲ್ಲಿ ದಾವಾ ಸ್ವತ್ತನ್ನು ತಿಮ್ಮಮ್ಮನವರಿಗೆ ಯಾವುದೇ ಆಧಾರ ಮಾಡಿಲ್ಲ. ದೇವಿರಮ್ಮನವರ ಮರಣಾ ನಂತರ ಅವರ ಮಕ್ಕಳಾದ ದೊಡ್ಡತಿಮ್ಮಮ್ಮ ಮತ್ತು ಚಿಕ್ಕತಿಮ್ಮಮ್ಮ ಯಾವುದೇ ವಿಭಾಗ ಮಾಡಿಕೊಂಡಿಲ್ಲ. ಸರ್ವೆ ನಂ. 120/3 ರಲ್ಲಿ ಒಟ್ಟು 2 ಎಕರೆ 9 ಗುಂಟೆ ಜಮೀನು ವಿಭಾಗವಾಗದ ಕಾರಣ ಚಿಕ್ಕತಿಮ್ಮಮ್ಮನವರಿಗೆ ಅದರ ಸಂಪೂರ್ಣ ವಿಸ್ತೀರ್ಣದಲ್ಲಿ ಅಧಿಕಾರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಅ.ದಾ ಸಂ. 378/2016 ರಲ್ಲಿ ನನ್ನ ಹಾಗೂ ಶಿವಣ್ಣ ಮತ್ತು ಚಿಕ್ಕತಿಮ್ಮಮ್ಮ ನವರ ವಿರುದ್ದ ಈ ದಾವೆಯಲ್ಲಿನ ಪ್ರತಿವಾದಿಗಳು ಭಾಗಂಶ ಕೋರಿ ದಾವೆ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನನಗೆ ಆದಾವೆ ನೋಟೀಸ್ ಬಂದಿದ್ದು ನಾನು ವಕೀಲರ ಮುಖಾಂತರ ಹಾಜರಾಗಿದ್ದು ನನಗೆ ಸದರಿ ದಾವೆ ಬಗ್ಗೆ ಮಾಹಿತಿ ಇದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಅ.ದಾ ಸಂ. 26/2022 ರಲ್ಲಿ ಇದೇ ಪ್ರತಿವಾದಿಗಳ ವಿರುದ್ದ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿದ್ದೇನೆ ಎಂದರೆ ಸರಿ.ಈ ದಾವೆ ಹಾಗೂ ಆ ದಾವೆಯಲ್ಲಿ ಒಂದೇ ಪರಿಹಾರ ಕೇಳಿದ್ದೇನೆಂದರೆ ಸರಿ. ದೊಡ್ಡ ತಿಮ್ಮಮ್ಮ ಮತ್ತು ಚಿಕ್ಕತಿಮ್ಮಮ್ಮ ನನ್ನ ಹತ್ತಿರ ಸಂಬಂಧಿಗಳು ಎಂದರೆ ಸರಿ. ಚಿಕ್ಕತಿಮ್ಮಮ್ಮನವರಿಂದ ದಾವಾ ಸ್ವತ್ತಿನ ಕ್ರಯ ಪತ್ರ ಮಾಡಿಕೊಂಡಾಗ ದೊಡ್ಡ ತಿಮ್ಮಮ್ಮ ಇರಲಿಲ್ಲ ಎಂದರೆ ಸರಿ. ಸದರಿ ಕ್ರಯ ಮಾಡಿಕೊಳ್ಳುವಾಗ

ನಾನು ದೊಡ್ಡ ತಿಮ್ಮಮ್ಮನವರು ಮಕ್ಕಳಾದ ಪ್ರತಿವಾದಿಯರನ್ನು ಕರೆಸಿ ಅವರಿಂದ ಪತ್ರಕ್ಕೆ ಯಾವುದೇ ಸಹಿ ಪಡೆದಿಲ್ಲ. ದೊಡ್ಡ ತಿಮ್ಮಮ್ಮನವರ ಮರಣಾ ನಂತರ ಅವರ ಗಂಡ ಮತ್ತು ಮಕ್ಕಳು ದಾವಾ ಸ್ವತ್ತಿಗೆ ಹಕ್ಕುದಾರರು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದಕ್ಕೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ನೀಡಿಲ್ಲ. ನನ್ನ ಸ್ವಾಧೀನ ತೋರಿಸಲು ಸಂಬಂಧಪಟ್ಟ ಇಲಾಖೆಯಿಂದ ಇಡುವಳಿ ಹಾಗೂ ಪಹಣಿ ಪತ್ರಿಕೆಯನ್ನು ಪಡೆದು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಇರಲ್ಲಿಲ್ಲ ನನಗೆ ಆ ಬಗ್ಗೆ ಗೊತ್ತಿಲ್ಲದ ಕಾರಣ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ಹಸ್ತಕ್ಷೇಪ ಮಾಡಿದ್ದಕ್ಕೆ ಪೊಲೀಸರಿಗೆ ದೂರು ನೀಡಿದ್ದೇನೆ. ದೂರಿನ ಮೇರೆಗೆ ಪ್ರತಿವಾದಿಯರ ವಿರುದ್ದ ಎಫ್.ಐ.ಆರ್. ಆಗಿಲ್ಲ ರಾಜಿ ಮಾಡಲಾಗಿತ್ತು. ದೂರಿಗೆ ಸಂಬಂಧಿಸಿದಂತೆ ಎನ್.ಸಿ.ಆರ್. ಅಥವಾ ದೂರಿನ ಪ್ರತಿ ನ್ಯಾಯಾಲಯಕ್ಕೆ ನೀಡಿಲ್ಲ. ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ತೊಂದರೆ ಉಂಟು ಮಾಡಿಲ್ಲ. ಆ ಬಗ್ಗೆ ಯಾವುದೇ ದೂರು ನೀಡಿಲ್ಲ, ಯಾವುದೇ ಪಂಚಾಯಿತಿ ಆಗಿಲ್ಲಎಂದರೆ ಸ ರಿಯಲ್ಲ. 01.09.2016 ರಲ್ಲಿ ಚಿಕ್ಕತಿಮ್ಮಮ್ಮರವರಿಂದ ಸರ್ವೆ ನಂ 120/3 ರಲ್ಲಿ 26 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸುಳ್ಳು ಖಾತೆ ಮಾಡಿಸಿಕೊಂಡಿದ್ದೇನೆಂದರೆ ಸರಿಯಲ್ಲ.

ನನಗೆ ದಾವಾ ಸ್ವತ್ತಿನ ಮೇಲೆ ಮಾಲೀಕತ್ವ ಇಲ್ಲ ನನ್ನ ಪರವಾಗಿ ಆದ ಕ್ರಯಪತ್ರಕ್ಕೆ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಕ್ರಯಪತ್ರ ಮಾಡಿಸಿಕೊಂಡಿದ್ದೇನೆಂದರೆ ಸರಿಯಲ್ಲ. ನಾನು ಕರ್ತವ್ಯದಲ್ಲಿದ್ದ ಕಾರಣ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲ್ಲಿಲ್ಲ, ಪ್ರತಿವಾದಿಯರು ಸ್ವಾಧೀನದಲ್ಲಿದ್ದರು, ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ, ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಗಿಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ